ಮೈಸೂರು ಸಬ್ ಜಡ್ಜ್ರೀಯವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜೀ ನಂಬರ್ 329.

ಮೃತಪಟ್ಟ ನರಸಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾಳು ನಾಗಮ್ಮನು, ಮೃತಪಟ್ಟ ಸದರೀ ನರಸಯ್ಯನವರಿಗೆ, ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಣದ ತಾಲ್ಲೂಕು ಗಂಜಾಂ ಸ್ಥಳದ ಸದರೀ ನಾಗಮ್ಮನವರು ಸದರೀ ವಾಸಸ್ಥನಾಗಿ ಮೃತಪಟ್ಟ ನರಸಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ನಾಗಮ್ಮನವರ ಅರ್ಜಿಯನ್ನ 1890ನೇ ಇಸವಿ ಜನವರಿ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ನಿರ್ಣೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ಡಿಸಂಬರು ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡೋಣಾಗಿಧೆ.

ಎಂ. ರಾಮಸ್ವಾಮೈಯ್ಯರ್,
ಸಬ್ ಜಡ್ಜ್.

ಅಷ್ಟ್ಯಗ್ರಾಮ ಡಿವಿಜ್.

ಇಸ್ತಿಹಾರ್‌ನಾಮೆಗಳು.

ತಾರೀಖು 9ನೇ ಡಿಸಂಬರ್ 1890.

ಇದರಿಂದ ಪ್ರಕಟಪಡಿಸುವದೇನಂದೆ—1891ನೇ ಇಸವಿಯ ಮೈಸೂರು ಡಿಸ್ಟ್ರಿಕ್ಟು ಕ್ರಿಮಿನಲ್ ಸೆಷನ್ಸ್ ವಿಚಾರಣೆಯು ಮೈಸೂರಲ್ಲಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ನಡಿಸಲ್ಪಡುವದು.

ಫೆಬ್ರವರಿ 2ನೇ ಸೋಮವಾರ	ಆಗಸ್ಟ್ 3ನೇ ಸೋಮವಾರ
ಮಾರ್ಚ್ 16ನೇ ಸೋಮವಾರ	ಅಕ್ಟೋಬರ್ 5ನೇ ಸೋಮವಾರ
ಜೂನ್ 1ನೇ ಸೋಮವಾರ	ಡಿಸಂಬರ್ 7ನೇ ಸೋಮವಾರ

ಸೆಷನ್ಸಿಗೆ ಕಮ್ಮಿಟ್ ಮಾಡತಕ್ಕ ಅಧಿಕಾರ ಹೊಂದಿರುವ ಮ್ಯಾಜಿಸ್ಟ್ರೇಟರುಗಳು ಅವರಿಂದ ಕಮಿಟ್ ಮಾಡಲ್ಪಡುವ ಮೊಕದ್ದ ಮೆಗಳಲ್ಲಿ ಆಯಾ ಕಕ್ಷಿಗಾರರಿಂದಲೂ ಸಾಕ್ಷಿಗಳಿಂದಲೂ ಸಹ ಮೇಲೆ ಕಂಡ ತಾರೀಖುಗಳಲ್ಲಿ ಮೈಸೂರು ಮೊಕ್ತಾಂ ಸೆಷನ್ಸ್ ಕೋರ್ಟಿನ ಮುಂದೆ ಹಾಜರಿರುವ ಬಗ್ಯೆ ಮುಚ್ಚಳಿಕೆ ತೆಗದುಕೊಳ್ಳಬೇಕೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

ಮೈಸೂರು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಮೇಲೆ ಕಂಡ ತಾರೀಖುಗಳಲ್ಲಿ ಮಾಮೂಲ್ ಮೇರ ಪೊಲೀಸ್ ಏರ್ಪಾಡುಗಳನ್ನು ಮಾಡಲ್ಪಡುವ ಬಗ್ಯೆ ಇದರಿಂದ ಕೇಳಿಕೊಳ್ಳಲ್ಪಟ್ಟಿದ್ದಾರೆ.

ಇದರಿಂದ ಪ್ರಕಟಪಡಿಸುವದೇನಂದರೆ—1891ನೇ ಇಸವಿಯ ಹಾಸನ ಡಿಸ್ಟ್ರಿಕ್ಟು ಕ್ರಿಮಿನಲ್ ಸೆಷನ್ಸ್ ವಿಚಾರಣೆಯು ಹಾಸನದಲ್ಲಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ನಡಿಸಲ್ಪಡುವದು.

ಜನವರಿ 12ನೇ ಸೋಮವಾರ	ಜುಲೈ 6ನೇ ಸೋಮವಾರ
ಮಾರ್ಚ್ 2ನೇ ಸೋಮವಾರ	ಸೆಪ್ಟಂಬರ್ 14ನೇ ಸೋಮವಾರ
ಮೇ 18ನೇ ಸೋಮವಾರ	ನವಂಬರ್ 10ನೇ ಮಂಗಳವಾರ

ಸೆಷನ್ಸಿಗೆ ಕಮಿಟ್ ಮಾಡತಕ್ಕ ಅಧಿಕಾರ ಹೊಂದಿರುವ ಮ್ಯಾಜಿಸ್ಟ್ರೇಟರುಗಳು ಅವರಿಂದ ಕಮ್ಮಿಟ್ ಮಾಡಲ್ಪಡುವ ಮೊಕದ್ದ ಮೆಗಳಲ್ಲಿ ಆಯಾ ಕಕ್ಷಿಗಾರರಿಂದಲೂ ಸಾಕ್ಷಿಗಳಿಂದಲೂ ಸಹ ಮೇಲೆ ಕಂಡ ತಾರೀಖುಗಳಲ್ಲಿ ಹಾಸನ ಮೊಕ್ತಾಂ ಸೆಷನ್ಸ್ ಕೋರ್ಟಿನ ರೂಟಿರೂ ಹಾಜರಿರುವ ಬಗ್ಯೆಮುಚ್ಚಳಿಕೆಯನ್ನು ತೆಗದುಕೊಳ್ಳಬೇಕೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

ಹಾಸನ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಮೇಲೆ ಕಂಡ ತಾರೀಖುಗಳಲ್ಲಿ ಮಾಮೂಲ್ ಮೇರೆಪೊಲೀಸ್ ಏರ್ಪಾಡುಗಳನ್ನು ಮಾಡುವ ಬಗ್ಯೆ ಇದರಿಂದ ಕೇಳಿಕೊಳ್ಳಲ್ಪಟ್ಟಿದ್ದಾರೆ.

ಸಿ. ಶ್ರೀನಿವಾಸಯ್ಯಂಗಾರ್,
ಸೆಷನ್ಸ್ ಜಡ್ಜ್.